ನೆರಳೂರು ಗ್ರಾಮ ಪಂಚಾಯಿತಿ ಕಾರ್ಯಾಲಯ

ನೆರಳೂರು ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು - 562 107.

ದಿನಾಂಕ: 09.01.2024

ನೆ.ಗ್ರಾ.ಪಂ:100 /2023-24

ನಿರಾಕ್ಷೇಪಣಾ ಪತ್ರ

ಬೆಂಗಳೂರು ನಗರ ಜಿಲ್ಲೆ,ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ನೆರಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆರಳೂರು ಗ್ರಾಮದ ಸರ್ವೆ ನಂಬರ್ 253/1ರಲ್ಲಿ 2 ಎಕರೆ 07 ಗುಂಟೆ, ನೆರಳೂರು ಗ್ರಾಮದ ಸರ್ವೆ ನಂಬರ್ 253/2ರಲ್ಲಿ 2 ಎಕರೆ 04 ಗುಂಟೆ ಮತ್ತು ನೆರಳೂರು ಗ್ರಾಮದ ಸರ್ವೆ ನಂಬರ್ 266ರಲ್ಲಿ 36 ಗುಂಟೆ ಒಟ್ಟು 5 ಎಕರೆ 07 ಗುಂಟೆ ಜಮೀನು ಇದ್ದು, **ಜಿಲ್ಲಾಧಿಕಾರಿಗಳ ಭೂ ಪರಿವರ್ತನಾ ಆದೇಶ ಸಂಖ್ಯೆ ಎಎಲ್ಎನ್(ಎ)(ಎ)ಎಸ್ಆರ್:135/ 2023-24 ದಿನಾಂಕ: 31.10.2023, ಎಎಲ್ಎನ್(ಎ)(ಎ)ಎಸ್ಆರ್:136/2023-24 ದಿನಾಂಕ: 31.10.2023 ಮತ್ತು ಎಎಲ್ಎನ್(ಎ)(ಎ)ಎಸ್ಆರ್:138/2023-24 ದಿನಾಂಕ: 08.11.2023** ರಂತೆ ಅರ್ಜಿದಾರರು ಅಭಿವೃದ್ಧಿ ಪಡಿಸಲು ನಿರಾಕ್ಷೇಪಣಾ ಪತ್ರ ಮತ್ತು ಗ್ರಾಮ ಪಂಚಾಯಿತಿ ವತಿಯಿಂದ ನೀರು ಸರಬರಾಜಿನ ಬಗ್ಗೆ ದೃಢೀಕರಣ ನೀಡಲು ಮಾಡಿರುವ ಮನವಿಯಂತೆ ನಮ್ಮ ಗ್ರಾಮ ಪಂಚಾಯಿತಿಯಿಂದ ಸರ್ವೆ ನಂಬರ್‌ಗಳಾದ 253/1, 253/2 ಮತ್ತು 266ರಲ್ಲಿ 5-07 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆಯಲು ನಮ್ಮದು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆಗೊಂಡ ನಕ್ಷೆಗಳನ್ನು ಪಂಚಾಯಿತಿಗೆ ಸಲ್ಲಿಸಿದ್ದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಪಂಚಾಯಿತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂಧಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯವಿದ್ದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು (ಲಭ್ಯತೆಗನುಗುಣವಾಗಿ) ಈ ಮೂಲಕ ದೃಢೀಕರಿಸಿದೆ. ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದ್ದಲ್ಲಿ, ಸರಬರಾಜಿನಲ್ಲಿ ವ್ಯತ್ಯಾಸ ಹಾಗೂ ಸ್ಥಗಿತದ ಬಗ್ಗೆ ಆಯಾ ಕಾಲಕ್ಕೆ ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ
ನೆರಳೂರು ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು, ಬೆಂ.ನ.ಜಿಲ್ಲೆ.

ರವರಿಗೆ
ಮಾನ್ಯ ಸದಸ್ಯ ಕಾರ್ಯದರ್ಶಿಗಳು
ಆನೇಕಲ್ ಯೋಜನಾ ಪ್ರಾಧಿಕಾರ
ನಂ.430, "ಅಣ್ಣ" ಬಿಲ್ಡಿಂಗ್ ಹೆನ್ನಾಗರ ಗೇಟ್
ಅತ್ತಿಬೆಲೆ ಹೋಬಳಿ ಹೊಸೂರು ರಸ್ತೆ
ಆನೇಕಲ್ ತಾಲ್ಲೂಕು ಬೆಂಗಳೂರು-560099

For SIGNATURE DWELLINGS PVT. LTD.

Managing Director

Scanned by CamScanner